**Fax No** - 08282-256262
**E-mail**:kuvempuacademic@gmail.com

**Phone No** - 08282-256149
**Website:** www.kuvempu.ac.in

# ಕುವೆಂಪು ವಿಶ್ವವಿದ್ಯಾಲಯ

ವಿಶ್ವವಿದ್ಯಾಲಯ ಕಾರ್ಯಾಲಯ, ಶೈಕ್ಷಣಿಕ ವಿಭಾಗ, ಕುವೆಂಪು ಶತಮಾನೋತ್ಸವ ಭವನ,
ಜ್ಞಾನಸಹ್ಯಾದ್ರಿ, ಶಂಕರಘಟ್ಟ – 577 451, ಶಿವಮೊಗ್ಗ ಜಿಲ್ಲೆ.

---

ಸಂಖ್ಯೆ:KU/AC-2/ 2059 /2025 ದಿನಾಂಕ:30-08-2025

## ಸುತ್ತೋಲೆ

ವಿಷಯ: ವಿಶ್ವವಿದ್ಯಾಲಯದಲ್ಲಿ ಸಂಶೋಧನಾರ್ಥಿಗಳ ವೇದಿಕೆ (Research Scholars' Forum) ಸ್ಥಾಪಿಸುವ ಬಗ್ಗೆ
ಉಲ್ಲೇಖ: ಮಾನ್ಯ ಕುಲಪತಿಗಳ ಆದೇಶದ ದಿನಾಂಕ: 23-08-2025

---

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಮಾನ್ಯ ಕುಲಪತಿಗಳ ಆದೇಶಾನುಸಾರ ದಿನಾಂಕ 19-08-2025ರಂದು ವಿಶ್ವವಿದ್ಯಾಲಯದ ಎಲ್ಲಾ ಸಂಶೋಧನಾರ್ಥಿಗಳೊಂದಿಗೆ ನಡೆಸಿದ ಸಭೆಯಲ್ಲಿ ತೆಗೆದುಕೊಳ್ಳಲಾದ ನಿರ್ಣಯಗಳ ನಡವಳಿಗಳನ್ನು ಈ ಸುತ್ತೋಲೆಯೊಂದಿಗೆ ಲಗತ್ತಿಸಲಾಗಿದೆ. ಸದರಿ ನಡವಳಿಗಳನ್ನು ತಮ್ಮ ವಿಭಾಗದ ಸಂಶೋಧನಾರ್ಥಿಗಳ ಗಮನಕ್ಕೆ ತರುವಂತೆ ತಿಳಿಸಲಾಗಿದೆ.

ಕುಲಸಚಿವ
ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನ ಸಹ್ಯಾದ್ರಿ
ಶಂಕರಘಟ್ಟ-577 451.
ಶಿವಮೊಗ್ಗ ಜಿಲ್ಲೆ

30/8/2025

ಗೆ,
ವಿಶ್ವವಿದ್ಯಾಲಯದ ಎಲ್ಲಾ ಸ್ನಾತಕೋತ್ತರ ವಿಭಾಗಗಳ ಮುಖ್ಯಸ್ಥರುಗಳಿಗೆ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ/ಶಿವಮೊಗ್ಗ/ಕಡೂರು

ಪ್ರತಿ:
1. ಆಪ್ತ ಸಹಾಯಕರು: ಮಾನ್ಯ ಕುಲಪತಿಗಳು/ಕುಲಸಚಿವರು, ಕುವೆಂಪು ವಿಶ್ವವಿದ್ಯಾಲಯ,ಶಂಕರಘಟ್ಟ.
2. ಕಛೇರಿ ಪ್ರತಿ.

**ಕುವೆಂಪು ವಿಶ್ವವಿದ್ಯಾಲಯ**

**ದಿನಾಂಕ:19-08-2025ರಂದು ಸಂಶೋಧನಾ ಅಭ್ಯರ್ಥಿಗಳೊಂದಿಗೆ ಪ್ರೊ.ಎಸ್.ಪಿ.ಹಿರೇಮಠ್ ಸಭಾಂಗಣದಲ್ಲಿ ನಡೆದ ಸಭೆಯ ನಡಾವಳಿಗಳು**

ಮಾನ್ಯ ಕುಲಪತಿಗಳು ಪ್ರಾಸ್ತಾವಿಕವಾಗಿ ಮಾತನಾಡುತ್ತಾ, ಇತ್ತೀಚೆಗೆ ವಿಶ್ವವಿದ್ಯಾಲಯಕ್ಕೆ ನ್ಯಾಕ್ ಸಮಿತಿಯು ಭೇಟಿ ನೀಡಿದ ಸಂದರ್ಭದಲ್ಲಿ ಕೆಲವು ಅಂಶಗಳನ್ನು ಉಲ್ಲೇಖಿಸಿ ಅವುಗಳ ಸುಧಾರಣೆಯಾಗಬೇಕಾಗಿದೆ ಎಂದರು.

## Research Scholars Forum

ವಿಶ್ವವಿದ್ಯಾಲಯದ ಉನ್ನತ ಶ್ರೇಣಿಗೆ ಅತ್ಯಗತ್ಯವಾಗಿರುವ ವಿದ್ಯಾರ್ಥಿಗಳ ಮತ್ತು ಸಂಶೋಧನಾರ್ಥಿಗಳ ಶೈಕ್ಷಣಿಕ ಚಟುವಟಿಕೆಗಳಲ್ಲಿನ ಪಾಲ್ಗೊಳ್ಳುವಿಕೆಯು (Student Representation) ಸಾಕಷ್ಟು ಪ್ರಮಾಣದಲ್ಲಿ ಇಲ್ಲದಿರುವುದನ್ನು ಸಭೆಯ ಗಮನಕ್ಕೆ ತಂದರು. ಈ ಒಂದು ಕ್ಷೇತ್ರದಲ್ಲಿ ವಿಶ್ವವಿದ್ಯಾಲಯವು ಸಾಕಷ್ಟು ಪ್ರಯತ್ನಪಡಬೇಕಾಗಿರುತ್ತದೆ ಎಂದು ವಿವರಿಸಿದರು.

- ಅದಕ್ಕಾಗಿ ಮೊದಲನೇ ಹಂತವಾಗಿ ವಿಶ್ವವಿದ್ಯಾಲಯದಲ್ಲಿ ಸಂಶೋಧನಾ ವಿದ್ಯಾರ್ಥಿಗಳ ವೇದಿಕೆ(Research Scholars Forum) ಯನ್ನು ಸ್ಥಾಪಿಸಿ ಈ ವೇದಿಕೆಯ ಮೂಲಕ ಸಂಶೋಧನಾರ್ಥಿಗಳು ತಮ್ಮ ಸಂಘಟನೆಯನ್ನು ಕೈಗೊಳ್ಳಬೇಕೆಂದರು.
- ಈ ವೇದಿಕೆಯ ಕಾರ್ಯ ಚಟುವಟಿಕೆಗಳನ್ನು ಕೈಗೊಳ್ಳಲು ಎಲ್ಲಾ ಸಂಶೋಧನಾರ್ಥಿಗಳು ಒಮ್ಮತದಿಂದ ಅಧ್ಯಕ್ಷರು, ಕಾರ್ಯದರ್ಶಿ ಹಾಗೂ ಖಜಾಂಚಿಯನ್ನು ನೇಮಿಸಿಕೊಂಡು ಕಾರ್ಯ ನಿರ್ವಹಿಸಬೇಕು. ಕಾಲ ಕಾಲಕ್ಕೆ ವಿಭಾಗಾವಾರು ಸರದಿಯಂತೆ (rotation) ಯಾವುದೇ ಭಿನ್ನಾಭಿಪ್ರಾಯ ಮೂಡಲು ಅವಕಾಶವಿಲ್ಲದಂತೆ ಕಾರ್ಯ ನಿರ್ವಹಿಸಬೇಕು.
- ಈ ವೇದಿಕೆಯ ಮುಖಾಂತರ ಅಂತರ್ ಶಿಸ್ತೀಯ (Inter Disciplinary) ಚಟುವಟಿಕೆಗಳ ಮೂಲಕ ವಿದ್ಯಾರ್ಥಿಗಳ ಸಂಘಟನೆಯಾಗಬೇಕಾಗಿದೆಯೆಂದರು.
- ವಿದ್ಯಾರ್ಥಿಗಳು ಸರಳವಾಗಿ, ಆಕರ್ಷಕವಾಗಿ ಮಾತನಾಡುವ ಸಂವಹನಾ ಕೌಶಲ್ಯವನ್ನು (Communication Skill) ಬೆಳೆಸಿಕೊಳ್ಳಬೇಕಾದ ಅವಶ್ಯಕತೆ ಇದೆ ಎಂದರು.
- ಈ ವೇದಿಕೆಯು ಸಂಶೋಧನಾರ್ಥಿಗಳಿಗೆ ಲಭ್ಯವಾಗುವ NET Fellowship, Prime Minister Research Fellowship , ಮುಂತಾದ ವಿವಿಧ ಶಿಷ್ಯವೇತನಗಳನ್ನು ದೊರಕಿಸಿಕೊಳ್ಳುವ ಬಗ್ಗೆ ಮಾಹಿತಿ ವಿನಿಮಯ ಮಾಡಿಕೊಳ್ಳಬೇಕು.

. . . . 2

- ಈ ವೇದಿಕೆಯಲ್ಲಿ ಸಂಶೋಧನಾರ್ಥಿಗಳು ಕೇವಲ ಶಿಷ್ಯವೇತನ, ಲ್ಯಾಪ್‌ಟಾಪ್ ವಿತರಣೆ ಇವುಗಳನ್ನು ಪಡೆಯಲು ಮಾತ್ರ ಕಾರ್ಯ ನಿರ್ವಹಿಸದೇ ತಾವು ಕೈಗೊಂಡಿರುವ ಸಂಶೋಧನೆಗಳ ಪ್ರಗತಿಯ ಬಗ್ಗೆ ಪ್ರತಿ ತಿಂಗಳು ಉಪಯುಕ್ತ : ಪರಿಣಾಮಕಾರಿ ವಿಷಯಗಳನ್ನು ಪರಸ್ಪರ ವಿನಿಮಯ ಮಾಡಿಕೊಂಡು ಜ್ಞಾನಾರ್ಜನೆಯನ್ನು ಇನ್ನು ಹೆಚ್ಚು ಹೆಚ್ಚು ಬೆಳೆಸಿಕೊಳ್ಳಬೇಕು. ಹಾಗೂ ಸದರಿ ವೇದಿಕೆ ಜ್ಞಾನ ಕೇಂದ್ರದ (Knowledge Centre) ಸಮನ್ವಯದೊಂದಿಗೆ ಕಾರ್ಯ ನಿರ್ವಹಿಸಬೇಕೆಂದರು.
- ಕೇವಲ ತಮ್ಮ ವಿಭಾಗದ ಅಧ್ಯಾಪಕರೊಂದಿಗೆ ಮಾತ್ರವಲ್ಲದೇ ಇತರೆ ವಿಭಾಗದ ಅಧ್ಯಾಪಕರುಗಳೊಂದಿಗೆ ಚರ್ಚಿಸಿ ಈ ವೇದಿಕೆಯ ಮುಖಾಂತರ ಅವರ ಸಲಹೆ ಸೂಚನೆಗಳನ್ನು ಪಡೆಯಬೇಕು.
- ಈ ವೇದಿಕೆಯ ಸ್ಥಾಪಿಸುವ ಕುರಿತಂತೆ ತಮ್ಮ ಅಮೂಲ್ಯ ಸಲಹೆಗಳನ್ನು ನೀಡಬೇಕೆಂದು ಕುಲಪತಿಯವರು ತಿಳಿಸಿದಾಗ ಕೆಲವು ಸಂಶೋಧನಾರ್ಥಿಗಳು ಈ ಕೆಳಕಂಡಂತೆ ತಮ್ಮ ಅಭಿಪ್ರಾಯವನ್ನು ವ್ಯಕ್ತ ಪಡಿಸಿದರು.

**Research Scholar Grant**

ವಿಶ್ವವಿದ್ಯಾಲಯದಲ್ಲಿ ಸಂಶೋಧನಾರ್ಥಿಗಳ ಉಪಯುಕ್ತ ಚಟುವಟಿಕೆಗಳಿಗಾಗಿ ಆಂತರಿಕ ಸಂಪನ್ಮೂಲ Research Scholar Grant (ಸಂಶೋಧನಾರ್ಥಿಗಳ ನಿಧಿ)ಯನ್ನು ಸ್ಥಾಪಿಸುವ ಅಗತ್ಯತೆ ಬಗ್ಗೆ ಕೆಲವು ಸಂಶೋಧನಾರ್ಥಿಗಳು ವಿವರಿಸಿದರು. ಹಾಗೂ ವಿವಿಧ ಶೈಕ್ಷಣಿಕ ಮತ್ತಿತರೆ ಸಂಸ್ಥೆಗಳ ಸಹಕಾರದ (Collaboration) ಮೂಲಗಳಿಂದ ಸಂಪನ್ಮೂಲವನ್ನು ಹೆಚ್ಚಿಸುವ (Resource Mobilisation) ದಿಸೆಯಲ್ಲಿ ಶ್ರಮಿಸಬೇಕೆಂದರು.

**Women Research Scholar Harassment Cell**

ವಿಶ್ವವಿದ್ಯಾಲಯದಲ್ಲಿ ಸಾಕಷ್ಟು ಸಂಖ್ಯೆಯ ಮಹಿಳಾ ಸಂಶೋಧನಾರ್ಥಿಗಳು ಸಂಶೋಧನೆ ಕೈಗೊಂಡಿರುವುದರಿಂದ ಅವರುಗಳು ವಿಭಾಗಗಳಲ್ಲಿ / ಪ್ರಯೋಗಾಲಯಗಳಲ್ಲಿ ವಿಭಾಗದ ಕಾರ್ಯ ನಿರ್ವಹಣಾ ವೇಳೆಯ ನಂತರದಲ್ಲೂ ಹೆಚ್ಚಿನ ಸಮಯ ಕಾರ್ಯ ನಿರ್ವಹಿಸುವ ಸಂದರ್ಭಗಳಲ್ಲಿ ಅವರ ಸುರಕ್ಷತೆಗಾಗಿ ಮತ್ತು ಮಹಿಳಾ ಸಂಶೋಧನಾರ್ಥಿಗಳ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಮಹಿಳಾ ಸಂಶೋಧನಾರ್ಥಿಗಳಲ್ಲಿ ಮೂವರು ಪ್ರತಿನಿಧಿಗಳನ್ನು ಗುರುತಿಸಿಕೊಂಡು ಮೇಲುಸ್ತುವಾರಿ ನೋಡಿಕೊಳ್ಳಬೇಕು ಎಂದರು. ಹಾಗೂ ಈ ಪ್ರಕ್ರಿಯೆಯನ್ನು ಪ್ರತಿಯೊಬ್ಬ ಮಹಿಳಾ ಸಂಶೋಧನಾರ್ಥಿಯೂ ಸರದಿಯಂತೆ ವಹಿಸಿಕೊಂಡು ನಡೆಸಬೇಕು ಎಂದರು.

. . . . . . 3

**Institutional Bio Safety Committee & Human & Animal Ethics Committee:**

ವಿಜ್ಞಾನ ನಿಕಾಯದ ವಿಷಯಗಳ ಪ್ರಯೋಗಾಲಯದಲ್ಲಿ ಪ್ರಯೋಗಗಳಿಗೆ ಬಳಸಲಾಗುವ ಬ್ಯಾಕ್ಟೀರಿಯ, ವೈರಸ್ ಮತ್ತು ಮುಂತಾದ ಅಣುಜೀವಿಗಳ ಸೂಕ್ತ ಸಂರಕ್ಷಣೆ : ನಿರ್ವಹಣೆಗಳಿಗಾಗಿ ವಿಶ್ವವಿದ್ಯಾಲಯದಲ್ಲಿ ಒಂದು Bio Safety Committee ಮತ್ತು Bio Safety Committee ಯನ್ನು ರಚಿಸುವ ಅಗತ್ಯತೆ ಬಗ್ಗೆ ಅಭಿಪ್ರಾಯ ವ್ಯಕ್ತವಾಯಿತು.

ರಾಷ್ಟ್ರೀಯ / ಅಂತರ ರಾಷ್ಟ್ರೀಯ ವಿಜ್ಞಾನಿ : ಗಣ್ಯವ್ಯಕ್ತಿಗಳನ್ನು ವಿಶ್ವವಿದ್ಯಾಲಯಕ್ಕೆ ಆಹ್ವಾನಿಸಿ ವಿಶ್ವವಿದ್ಯಾಲಯದ ಸಂಶೋಧನಾರ್ಥಿಗಳಿಗಾಗಿ ಸಮ್ಮೇಳನ, ವಿಚಾರ ಸಂಕಿರಣಗಳು, ಕಾರ್ಯಾಗಾರ ಮುಂತಾದುವುಗಳನ್ನು ಏರ್ಪಡಿಸಬೇಕೆಂಬ ಬಗ್ಗೆ ಅಭಿಪ್ರಾಯ ವ್ಯಕ್ತವಾಯಿತು.

**One Nation One Subscription Portal :**

**One Nation One Subscription Portal**ನ್ನು ವಿಶ್ವವಿದ್ಯಾಲಯದಲ್ಲಿ ಸ್ಥಾಪಿಸುವ ಬಗ್ಗೆ ಪ್ರಸ್ತಾಪಿಸಲಾಯಿತು.

ಡಾ: ಶ್ರೀಧರ್, ಸಹಾಯಕ ಗ್ರಂಥಪಾಲಕರು, ಇವರು ಭಾರತ ಸರ್ಕಾರ ಹಾಗೂ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಆಶಯದಂತೆ, ವಿಶ್ವವಿದ್ಯಾಲಯದಲ್ಲಿ ಈಗಾಗಲೇ **One Nation One Subscription Portal** ನ್ನು ಈಗಾಗಲೇ ಸ್ಥಾಪಿಸಲಾಗಿದ್ದು, ಸುಮಾರು 13,000ಕ್ಕೂ ಹೆಚ್ಚು ನಿಯತಕಾಲಿಗಳಿಗೆ ಚಂದಾದಾರಿಕೆಯಾಗಿದ್ದು, ವಿಶ್ವವಿದ್ಯಾಲಯದ ಎಲ್ಲಾ ವಿಭಾಗಗಳಿಗೂ Mapping ಮಾಡಲು ಕ್ರಮ ಕೈಗೊಳ್ಳಲಾಗಿದೆಯೆಂದರಲ್ಲದೆ, ಯಾವ ವಿಭಾಗದಲ್ಲೂ ಸಹ ವೀಕ್ಷಿಸಬಹುದಾಗಿದೆ ಎಂದು ಸಭೆಗೆ ವಿವರಿಸಿದರು.

ಕೆಲವು ಸಂಶೋಧನಾರ್ಥಿಗಳು Plagiarism Check ಪ್ರಕ್ರಿಯೆಯನ್ನು ವಿಭಾಗದ ಮಟ್ಟದಲ್ಲಿಯೇ ನಿರ್ವಹಿಸುವ ವ್ಯವಸ್ಥೆಯಾದಲ್ಲಿ ಸಂಶೋಧನಾ ಲೇಖನ ಹಾಗೂ ಪ್ರಬಂಧಗಳನ್ನು ಬರೆಯಲು ಅನುಕೂಲವಾಗುತ್ತದೆ ಎಂದರು.

ಡಾ: ಶ್ರೀಧರ್, ಸಹಾಯಕ ಗ್ರಂಥಪಾಲಕರು, ಇವರು ಮಾತನಾಡುತ್ತಾ ಈಗಿರುವ Plagiarism Check ತಂತ್ರಜ್ಞಾನವು ಯು.ಜಿ.ಸಿ.ಯ ನಿಯಂತ್ರಣದಿಂದ ಪಿ.ಹೆಚ್.ಡಿ.ಪ್ರಬಂಧಗಳ ಕೃತಿಚೌರ್ಯಕ್ಕಾಗಿ ಮಾತ್ರ ಒಡಂಬಡಿಕೆಯಾನುಸಾರ ನಿರ್ವಹಿಸಲಾಗುತ್ತಿದ್ದು, ಇತರೆ ಯಾವುದೇ ಕಾರಣಗಳಿಗಾಗಿ ಇದನ್ನು ಬಳಸುವುದು ನಿಯಮಬಾಹಿರವಾಗುತ್ತದೆ ಎಂಬುದನ್ನು ವಿವರಿಸಿದರು.

. . . . . 4

ಅಲ್ಲದೇ, ಎಲ್ಲಾ ವಿಭಾಗಗಳಿಗೂ ಸದರಿ ಸೌಲಭ್ಯವನ್ನು ವಿಸ್ತರಿಸಬೇಕಾದಲ್ಲಿ ಸಂಶೋಧನಾ ಮತ್ತು ಅಭಿವೃದ್ಧಿ ಘಟಕ ಇವರಿಗೆ ಪ್ರಸ್ತಾವನೆಯನ್ನು ಸಲ್ಲಿಸಿ ಹೊಸ ಸಾಫ್ಟ್‌ವೇರ್ ಒಂದನ್ನು ಖರೀದಿಸಬೇಕಾಗುತ್ತದೆ ಎಂದರು.

ಕೆಲವು ಸಂಶೋಧನಾರ್ಥಿಗಳು ತಮಗೆ ಸಾಂಸ್ಥಿಕ ಇ-ಮೇಲ್ ಐ.ಡಿ.(Institutional e-mail ID)ಯನ್ನು ನೀಡಿದರೆ ಸಂಶೋಧನಾ ಕಾರ್ಯಗಳಿಗೆ ನೆರವಾಗುತ್ತದೆ ಎಂದು ಮತ್ತು ವಿಶ್ವವಿದ್ಯಾಲಯದಲ್ಲಿ ಕೈಗೊಳ್ಳಲಾದ ಉತ್ತಮ ಸಂಶೋಧನಾ ಚಟುವಟಿಕೆಗಳು ಸರ್ಕಾರದ ಮಟ್ಟದಲ್ಲಿ ಹಾಗೂ ಸಾರ್ವಜನಿಕ ವಲಯದಲ್ಲಿ ಗುರುತಿಸುವಂತಹ ವ್ಯವಸ್ಥೆಯಾಗಬೇಕು ಹಾಗೂ ಸಂಶೋಧನಾರ್ಥಿಗಳಿಗೆ ಪ್ರತ್ಯೇಕ ಸುದ್ದಿ ಪತ್ರಿಕೆಯ ಅವಶ್ಯಕತೆ ಇದೆಯೆಂಬ ಅಭಿಪ್ರಾಯವೂ ವ್ಯಕ್ತವಾಯಿತು.

ಮಂಗಳಮುಖಿ ಸಂಶೋಧನಾರ್ಥಿಗಳ ಅನುಕೂಲಕ್ಕಾಗಿ ಎಲ್ಲಾ ಕನಿಷ್ಠ ಅಗತ್ಯ ಸೌಲಭ್ಯಗಳನ್ನು ಒದಗಿಸಬೇಕೆಂಬ ಅಭಿಪ್ರಾಯ ಸಭೆಯಲ್ಲಿ ವ್ಯಕ್ತವಾಯಿತು.

ಮಾನ್ಯ ಕುಲಪತಿಗಳು ಮಾತನಾಡುತ್ತಾ, ಎಲ್ಲಾ ಸಂಶೋಧನಾರ್ಥಿಗಳು ಸಮಾಲೋಚಿಸಿ, ವೇದಿಕೆಯ ರೂಪು ರೇಷೆಗಳನ್ನು ಸಿದ್ಧಪಡಿಸಿಕೊಂಡು ವಿಶ್ವವಿದ್ಯಾಲಯಕ್ಕೆ ಒಂದು ಪ್ರಸ್ತಾವನೆಯನ್ನು ಸಲ್ಲಿಸಲು ತಿಳಿಸಿದರು. ಅಲ್ಲದೇ, ಸೆಪ್ಟೆಂಬರ್ 17 ರಂದು ಪ್ರಾಣಿಶಾಸ್ತ್ರ ವಿಭಾಗ ಹಾಗೂ Indian Academy of Sciences ಇವರ ಸಂಯುಕ್ತಾಶ್ರಯದಲ್ಲಿ ನಡೆಸಲಾಗುತ್ತಿರುವ ವಿಜ್ಞಾನ ಕಮ್ಮಟದಲ್ಲಿ (Symposium) ಎಲ್ಲಾ ಸಂಶೋಧನಾರ್ಥಿಗಳು ಭಾಗವಹಿಸುವುದರ ಮೂಲಕ ಸದುಪಯೋಗ ಪಡೆದುಕೊಳ್ಳಲು ಸಲಹೆ ನೀಡಿದರು. ನಂತರ ಅಂತಿಮವಾಗಿ , ತಮ್ಮ ಮುಕ್ತ ಅಭಿಪ್ರಾಯಗಳನ್ನು ವ್ಯಕ್ತ ಪಡಿಸಿದ ಎಲ್ಲಾ ಸಂಶೋಧನಾರ್ಥಿಗಳಿಗೆ ಧನ್ಯವಾದಗಳನ್ನು ಸಲ್ಲಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಿದರು.

ಹಾಜರಿದ್ದವರು:

1. ಡಾ: ಆರ್.ಹೆಚ್.ವಾಲ್ಮೀಕಿ, ಗ್ರಂಥಪಾಲಕರು,ಕುವೆಂಪು ವಿಶ್ವವಿದ್ಯಾಲಯ,
2. ಡಾ: ಶ್ರೀಧರ್, ಸಹಾಯಕ ಗ್ರಂಥಪಾಲಕರು

ಕುಲಪತಿಗಳು

ಕುಲಪತಿಗಳು
ಕುವೆಂಪು ವಿಶ್ವವಿದ್ಯಾನಿಲಯ
ಶಂಕರಘಟ್ಟ – 577 451,
ಶಿವಮೊಗ್ಗ ಜಿಲ್ಲೆ.